**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1000 |
| ಸದಸ್ಯರ ಹೆಸರು | : | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15.12.2025. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಹೈದರಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಬಿಕಾಂ, ಎಂಕಾಂ ಮತ್ತು ಬಿಎಡ್ ವ್ಯಾಸಂಗ ಮುಗಿಸಿ ಟಿಇಟಿಯಲ್ಲಿ ಉತ್ತೀರ್ಣರಾಗಿ ಸಿಇಟಿ ಬರೆಯಲು ವಂಚಿತರಾಗಿರುವವರ ಸಂಖ್ಯೆ ಎಷ್ಟು; ಸಿಇಟಿ ಪರೀಕ್ಷೆಯಿಂದ ವಂಚಿತರಾಗಲು ಕಾರಣವೇನು ಹಾಗೂ ಬಿಕಾಂ., ಎಂಕಾಂ ಪದವೀಧರರಿಗೆ ಬಿಎಡ್ ವ್ಯಾಸಂಗ ಮಾಡಲು 2015 ರಲ್ಲಿ ಅವಕಾಶ ನೀಡಲಾಗಿತ್ತು; (ಆದೇಶದ ಪ್ರತಿ ನೀಡುವುದು) | ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿ ಬಿ.ಕಾಂ. ಎಂ.ಕಾಂ ಮತ್ತು ಬಿ.ಇಡಿ ವ್ಯಾಸಂಗ ಮುಗಿಸಿ ಟಿ.ಇ.ಟಿಯಲ್ಲಿ 2015ನೇ ಸಾಲಿನಿಂದ 2024 ರವರೆಗೆ ಉತ್ತೀರ್ಣರಾಗಿರುವವರ ಸಂಖ್ಯಾ ವಿವರ ಕೆಳಕಂಡಂತಿದೆ:<br><br>**ಪತ್ರಿಕೆ ವಿವರ** — **ಉತ್ತೀರ್ಣರಾಗಿರುವವರ ಸಂಖ್ಯೆ**<br>ಟಿ.ಇ.ಟಿ ಪತ್ರಿಕೆ-1 — 109<br>ಟಿ.ಇ.ಟಿ ಪತ್ರಿಕೆ-2 — 514<br><br>ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪದವೀಧರರು ನಿಗದಿಪಡಿಸಿದ ಕನಿಷ್ಠ ಎರಡು ವಿಷಯಗಳನ್ನು ಬಿ.ಕಾಂ ಪದವಿಯಲ್ಲಿ ಅಧ್ಯಯನ ಮಾಡಿದ್ದಲ್ಲಿ ಅಂತಹವರು ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅರ್ಹರಾಗುತ್ತಾರೆ.<br><br>ಈ ನಿಬಂಧನೆಯನ್ನು ಪೂರೈಸದಿರುವ ಬಿಕಾಂ, ಎಂಕಾಂ ಪದವೀಧರರು ಸಿ.ಇ.ಟಿ. ಪರೀಕ್ಷೆಗೆ ಅರ್ಹರಾಗುವುದಿಲ್ಲ.<br><br>ಬಿಕಾಂ, ಎಂಕಾಂ ಪದವೀಧರರಿಗೆ ಬಿಎಡ್ ವ್ಯಾಸಂಗ ಮಾಡಲು 2015 ರಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ 212 ಯುಎನ್ಇ 2013, ದಿನಾಂಕ: 12.11.2013 ರನ್ವಯ ಅವಕಾಶ ಕಲ್ಪಿಸಲಾಗಿದೆ. ಸರ್ಕಾರದ ಆದೇಶ ಪ್ರತಿಯನ್ನು **ಅನುಬಂಧ** ದಲ್ಲಿ ಒದಗಿಸಿದೆ. |

| | | |
|---|---|---|
| (ಆ) | ಬಿಕಾಂ, ಎಂಕಾಂ ಹಾಗೂ ಬಿಎಡ್ ವ್ಯಾಸಂಗದ ಜೊತೆಗೆ ಟಿಇಟಿ ಪರೀಕ್ಷೆಯಲ್ಲಿಯು ಉತ್ತೀರ್ಣರಾಗಿರುವವರ ಸಂಖ್ಯೆ ಎಷ್ಟು; | ಬಿ.ಕಾಂ,, ಎಂ.ಕಾಂ, ಹಾಗೂ ಬಿಎಡ್ ವ್ಯಾಸಂಗದ ಜೊತೆಗೆ ಟಿಇಟಿ ಪರೀಕ್ಷೆಯಲ್ಲಿಯು ಉತ್ತೀರ್ಣರಾಗಿರುವವರ ಸಂಖ್ಯಾ ವಿವರ ಕೆಳಕಂಡಂತಿದೆ:<br><br>**ಪತ್ರಿಕೆ ವಿವರ** — **ಉತ್ತೀರ್ಣರಾಗಿರುವವರ ಸಂಖ್ಯೆ**<br>ಟಿ.ಇ.ಟಿ ಪತ್ರಿಕೆ-1 — 109<br>ಟಿ.ಇ.ಟಿ ಪತ್ರಿಕೆ-2 — 514 |
| (ಇ) | ಈ ಮೇಲ್ಕಂಡ ಪದವೀಧರರ ಹಿತದೃಷ್ಟಿಯಿಂದ ಸಿ ಅಂಡ್ ಆರ್ ನಿಯಮಗಳಲ್ಲಿ ಬದಲಾವಣೆ ಮಾಡಿ ಸಿಇಟಿ ಬರೆಯಲು ಅವಕಾಶ ನೀಡುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ? (ವಿವರ ನೀಡುವುದು) | ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (GPT) ಹುದ್ದೆಗೆ ನೇಮಕಾತಿ ಹೊಂದಲು ಭಾಷಾ ವಿಷಯ, ಗಣಿತ ಮತ್ತು ವಿಜ್ಞಾನ, ಜೈವಿಕ ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳನ್ನು ಪದವಿಯಲ್ಲಿ ವ್ಯಾಸಂಗ ಮಾಡಿದ ಪದವೀಧರರು ಅರ್ಹರಾಗಿರುತ್ತಾರೆಂದು ನಿಗಧಿಪಡಿಸಲಾಗಿದೆ. ಶಾಲೆಗಳಲ್ಲಿ ಬೋಧಿಸುವ ವಿಷಯಗಳಲ್ಲಿ ಯಾವುದಾದರೂ ಎರಡು ವಿಷಯಗಳನ್ನು ಐಚ್ಛಿಕ ವಿಷಯವನ್ನಾಗಿ ಪದವಿಯಲ್ಲಿ ಮೂರು ವರ್ಷಗಳ ಕಾಲ ವ್ಯಾಸಂಗ ಮಾಡಿರಬೇಕು. ಈ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಗೆ ಈಗಾಗಲೇ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. |

ಇಪಿ 211 ಡಿಎಆರ್ 2025

**(ಎಸ್. ಮಧುಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

ಅನುಬಂಧ

## ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ: ಬಿ.ಇಡಿ ಕೋರ್ಸಿನ ಪ್ರವೇಶಾತಿಗೆ ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ಸ್ ಎಜುಕೇಷನ್ (ಎನ್.ಸಿ.ಟಿ.ಇ.) ನಿಗದಿಪಡಿಸಿರುವ ಶೈಕ್ಷಣಿಕ ಅರ್ಹತೆಯನ್ನು ಪರಿಗಣಿಸುವ ಕುರಿತು.

ಓದಲಾಗಿದೆ:

1. ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ. ಇಡಿ 10 ಯುಬಿಸಿ 99 ದಿನಾಂಕ ........ ..................
2. 03.06.1999–(TCH B.Ed Rules-1999)
3. NCTE – Appendix -4 –ಬಿ.ಇಡಿ ದಾಖಲಾತಿ ನಿಯಮ
4. ಕುವೆಂಪು ವಿಶ್ವವಿದ್ಯಾಲಯ – ಅಧಿಸೂಚನೆ ಸಂಖ್ಯೆ. ಕು.ವಿ.ಶೈ.ವಿ: . ಎಸಿ: ಪಜಿ–2:5253:2012–13 ದಿನಾಂಕ 08.01.2013
5. ಬೆಂಗಳೂರು ವಿಶ್ವವಿದ್ಯಾಲಯರವರ ಪತ್ರ ಸಂ. ಎಸಿಎ–3 ಎ–3:ಬಿ.ಇಡಿ:2013–14...... ದಿ: 29–07–2013
6. ಸರ್ಕಾರಿ ಆದೇಶ ಸಂ. ಇಡಿ 39 ಯುಎನ್ಇ 2011 ಬೆಂಗಳೂರು ದಿನಾಂಕ 11.08.2011

ಮೇಲಿನ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 03.06.1999ರ ದಾಖಲಾತಿ ನಿಯಮಗಳ ಪ್ರಕಾರ ಬಿ.ಇಡಿ ಪ್ರವೇಶಾತಿಗೆ ಅಭ್ಯರ್ಥಿಯು ಕಲಾ ಅಥವಾ ವಿಜ್ಞಾನ ವಿಷಯದಲ್ಲಿ ಪದವಿ ಪಡೆದಿರಬೇಕು ಮತ್ತು ಪದವಿಯಲ್ಲಿ ಈ ಮುಂದೆ ನಮೂದಿಸಿರುವ ಭಾಷೆಗಳಲ್ಲಿ ಒಂದು ಭಾಷೆಯನ್ನು–ಇಂಗ್ಲೀಷ್, ಕನ್ನಡ, ಹಿಂದಿ, ಉರ್ದು, ಸಂಸ್ಕೃತ ಮತ್ತು ಮರಾಠಿ ಹಾಗೂ ಮೂರು ಐಚ್ಛಿಕ ವಿಷಯಗಳಲ್ಲಿ ಈ ಕೆಳಗೆ ಪಟ್ಟಿ ಮಾಡಿರುವ ಯಾವುದಾದರೂ ಎರಡು ಐಚ್ಛಿಕ ವಿಷಯಗಳನ್ನು ಪದವಿಯ ಮೂರು ವರ್ಷಗಳಲ್ಲಿ ಅಧ್ಯಯನ ಮಾಡಿರಬೇಕು.

2) ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳ, ಅರ್ಥಶಾಸ್ತ್ರ, ಭೌತಶಾಸ್ತ್ರ ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಗಣಿತ; ಜೀವಶಾಸ್ತ್ರ, ಕನ್ನಡ, ಹಿಂದಿ, ಉರ್ದು, ಸಂಸ್ಕೃತ ಮತ್ತು ಮರಾಠಿ (ಪ್ರೌಢಶಾಲೆಗಳಲ್ಲಿ ಬೋಧಿಸುವ ವಿಷಯಗಳು) ಇವುಗಳ ಮೇಲೆ ಬೋಧನಾ ವಿಷಯವು ಆಧಾರಗೊಂಡಿರುತ್ತದೆ.

3) ಕರ್ನಾಟಕ ರಾಜ್ಯ ಬಿಟ್ಟು ಹೊರರಾಜ್ಯಗಳ ವಿಶ್ವವಿದ್ಯಾಲಯಗಳಿಂದ ಪದವಿ ಪಡೆದಿರುವ ಅಭ್ಯರ್ಥಿಗಳು ಮೂರು ವರ್ಷಗಳ ಬಿ.ಎ./ಬಿ.ಎಸ್ಸಿ ಪದವಿ ವ್ಯಾಸಂಗದ ಅವಧಿಯಲ್ಲಿ ಮೇಲೆ ತಿಳಿಸಿರುವಂತೆ ಭಾಷಾ ವಿಷಯದ ಜೊತೆಗೆ ಕನಿಷ್ಠ ಎರಡು ಐಚ್ಛಿಕ ವಿಷಯಗಳನ್ನು ವ್ಯಾಸಂಗ ಮಾಡಿದ್ದು ಆ ಪೈಕಿ ಒಂದು ವಿಷಯವನ್ನು ಕನಿಷ್ಟ ಎರಡು ವರ್ಷಗಳು ವ್ಯಾಸಂಗ ಮಾಡಿ, ವಿಶ್ವವಿದ್ಯಾಲಯದ ಪರೀಕ್ಷೆ ತೆಗೆದುಕೊಂಡಿರಬೇಕು. ಆದರೆ ಪ್ರಧಾನ ವಿಷಯವನ್ನು ಎಲ್ಲಾ ಮೂರು ವರ್ಷಗಳು ವ್ಯಾಸಂಗ ಮಾಡಿ ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಮೂರು ವರ್ಷಗಳ ವ್ಯಾಸಂಗದ ಅವಧಿಯಲ್ಲಿ ಯಾವುದೇ ವರ್ಷ ವಿಷಯ ಬದಲಾಯಿಸಿಕೊಂಡಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಬಿ.ಇಡಿ ದಾಖಲಾತಿಗೆ ಅರ್ಹರಲ್ಲ.

4) ಬಿ.ಇಡಿ ತರಗತಿಗಳು ವಿಶ್ವವಿದ್ಯಾಲಯ ಮತ್ತು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಗಳಿಗೆ ಬಿ.ಇಡಿ ದಾಖಲಾತಿ ನೀಡಲು ದಾಖಲಾತಿಗೆ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಕೆಲವು ವ್ಯತ್ಯಾಸಗಳಿರುತ್ತವೆ.

1. ಕರ್ನಾಟಕ ರಾಜ್ಯದ ಬಿ.ಇಡಿ ಪ್ರವೇಶ ನಿಯಮಗಳ ಪ್ರಕಾರ ಬಿ.ಇಡಿ ದಾಖಲಾತಿಗೆ ಬಯಸುವ ಅಭ್ಯರ್ಥಿಗಳು ಬಿ.ಎ. ಅಥವಾ ಬಿ.ಎಸ್ಸಿ ಪದವಿ ಹೊಂದಿರುವವರಾಗಿರಬೇಕೆಂದು ತಿಳಿಸಿರುತ್ತಾರೆ. ಸದರಿ ಪದವಿಯಲ್ಲಿ ಶೇ. 10 ಆಂತರಿಕ ಅಂಕಗಳು ಸೇರಿ ಪ.ಜಾತಿ, ಪ.ಪಂ, ಪ್ರವರ್ಗ–1 ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಶೇ. 45 ಅಂಕಗಳು ಇರಬೇಕು. ಇತರರಿಗೆ ಶೇ. 10 ಆಂತರಿಕ ಅಂಕಗಳು ಸೇರಿ ಶೇ. 50 ಅಂಕಗಳನ್ನು ನಿಗದಿಪಡಿಸಲಾಗಿದೆ.

....2

2. ಬಿ.ಇಡಿ ತರಗತಿಗಳಿಗೆ ದಾಖಲಾತಿ ನಿಯಮಗಳನ್ನು ರಾಷ್ಟ್ರದಾದ್ಯಂತ ಏಕ ರೀತಿ ಪಾಲಿಸಲು ಎನ್.ಸಿ.ಟಿ.ಇ. ಪ್ರಕಾರ ಬಿ.ಇಡಿ ತರಗತಿಗಳಿಗೆ ದಾಖಲಾಗಲು ಅಭ್ಯರ್ಥಿಗಳು ಪದವಿ ಅಥವಾ ಸ್ನಾತಕೋತ್ತರ ಪದವಿಯಲ್ಲಿ ಶೇ.50ರಷ್ಟು ಅಂಕವನ್ನು ಗಳಿಸಿರಬೇಕು ಮತ್ತು ಪ.ಜಾತಿ, ಪ.ಪಂ, ಪ್ರವರ್ಗ-1 ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಶೇ. 45 ಅಂಕಗಳು ಇರಬೇಕೆಂದು ಆದೇಶಿಸಿದೆ. (ಆಂತರಿಕ ಅಂಕಗಳು ಸೇರಿ).

3. ಕರ್ನಾಟಕ ರಾಜ್ಯದ ಕುವೆಂಪು ವಿಶ್ವವಿದ್ಯಾಲಯ ಅನುಮೋದನೆ ಪಡೆದಿರುವ ಪದವಿಯಾದ ಬಿ.ಎ. ಬಿ.ಎಸ್ಸಿ. ಬಿ.ಕಾಂ. ಬಿ.ಬಿ.ಎಂ. ಮತ್ತು ಸ್ನಾತಕೋತ್ತರ ಪದವಿಯನ್ನು ಹೊಂದಿ ಅದರಲ್ಲಿ ಶೇ.50 ಅಂಕವನ್ನು, ಇತರೆ ವರ್ಗದವರು ಗಳಿಸಿರಬೇಕೆಂದು ಹಾಗೂ ಪ.ಜಾತಿ/ಪ.ಪಂ.ದವರಿಗೆ ಶೇ. 45 ಗಳಿಸಿರಬೇಕೆಂದು ತಿಳಿಸಿರುತ್ತಾರೆ. ವಿಶ್ವವಿದ್ಯಾಲಯ ಸುತ್ತೋಲೆ ಕ್ರಮ ಸಂಖ್ಯೆ: ಕು.ವಿ.ಎಸಿ-4(14):80:2008-09 ದಿನಾಂಕ 22.04.2008 ರಲ್ಲಿ ತಿಳಿಸಿರುವಂತೆ Content-cum-Methodology ಪಠ್ಯಕ್ರಮವನ್ನು ಅನುಸರಿಸಲು ತಿಳಿಸಲಾಗಿದೆ.

4. ಕರ್ನಾಟಕ ರಾಜ್ಯದ ಪದವಿ ಪೂರ್ವ ಕಾಲೇಜು ಉಪನ್ಯಾಸಕರುಗಳಿಗೆ ಶೈಕ್ಷಣಿಕ ಅರ್ಹತೆಯನ್ನು ನಿಗದಿಪಡಿಸುವಾಗ ಸ್ನಾತಕೋತ್ತರ ಜೊತೆ ಬಿ.ಇಡಿ ತರಗತಿ ಕಡ್ಡಾಯಗೊಳಿಸಲಾಗಿದೆ.

5) ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಒಂದೊಂದು ವಿಶ್ವವಿದ್ಯಾಲಯವು ಒಂದೊಂದು ರೀತಿಯ ಅರ್ಹತಾ ನಿಯಮಗಳನ್ನು ನಿಗದಿಪಡಿಸಿರುವುದು ಕಂಡುಬರುತ್ತದೆ. ಹಾಗೂ ಸರ್ಕಾರವು ಪದವಿ ಪೂರ್ವ ಉಪನ್ಯಾಸಕರಿಗೆ ಸ್ನಾತಕೋತ್ತರ ಪದವಿಯ ಜೊತೆ ಬಿ.ಇಡಿ ಪದವಿಯನ್ನು ಕಡ್ಡಾಯಗೊಳಿಸಿರುತ್ತದೆ. ಈ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 212 ಯುಎನ್‌ಇ 2013, ಬೆಂಗಳೂರು, ದಿನಾಂಕ 12-11-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ 1999ರ ಬಿ.ಇಡಿ ನಿಯಮಾವಳಿಗಳ ನಿಯಮ 3(2)ರಲ್ಲಿ ಇರುವ ಬಿ.ಇಡಿ ಪ್ರವೇಶಾತಿಗಾಗಿ ಶೈಕ್ಷಣಿಕ ಅರ್ಹತೆಯ ಅಂಶದ ಬಗ್ಗೆ ತಿದ್ದುಪಡಿಯನ್ನು ಕಾಯ್ದಿರಿಸಿ ಎನ್.ಸಿ.ಟಿ.ಇ.ಯ ನಿಯಮದಂತೆ:

(ಎ) ಪದವಿ ಪರೀಕ್ಷೆ ಮತ್ತು/ಅಥವಾ ಸ್ನಾತಕೋತ್ತರ ಪದವಿ ಅಥವಾ ಯಾವುದೇ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿದ್ದು, ಅದರಲ್ಲಿ ಆಂತರಿಕ ಅಂಕಗಳು ಸೇರಿದಂತೆ ಕನಿಷ್ಠ ಶೇ. 50 ಅಂಕಗಳನ್ನು ಗಳಿಸಿರುವ ಅಭ್ಯರ್ಥಿಗಳು ಬಿ.ಇಡಿ ದಾಖಲಾತಿಗೆ ಅರ್ಹರಿರುತ್ತಾರೆ.

(ಬಿ) ಪ.ಜಾತಿ, ಪ.ಪಂಗಡ, ಪ್ರವರ್ಗ-1 ಮತ್ತು ಅಂಗವಿಕಲ ಅಭ್ಯರ್ಥಿಗಳು ಪದವಿ ಪರೀಕ್ಷೆ ಮತ್ತು/ಅಥವಾ ಸ್ನಾತಕೋತ್ತರ ಪದವಿ ಅಥವಾ ಯಾವುದೇ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿದ್ದು, ಅದರಲ್ಲಿ ಆಂತರಿಕ ಅಂಕಗಳು ಸೇರಿದಂತೆ ಕನಿಷ್ಠ ಶೇ. 45 ಅಂಕಗಳನ್ನು ಪಡೆದಿರಬೇಕು. ವಿವಿಧ ಪ್ರವರ್ಗಗಳಿಗೆ ಸೀಟುಗಳ ಮೀಸಲಾತಿಯನ್ನು ಸರ್ಕಾರವು ಆಗಿಂದಾಗ್ಗೆ ಹೊರಡಿಸಲಾಗುವ ಸರ್ಕಾರಿ ಆದೇಶಗಳ ಮೇರೆಗೆ ನಿಗದಿಪಡಿಸಲಾಗುವುದು.

...3

2) ಅಭ್ಯರ್ಥಿಗಳು ಪದವಿ ಅಥವಾ ಸ್ನಾತಕೋತ್ತರ ಪದವಿಯಲ್ಲಿ ಶಾಲೆಗಳಲ್ಲಿನ ಬೋಧನಾ ವಿಷಯಗಳನ್ನು ಅಧ್ಯಯನ ಮಾಡಿದ್ದಲ್ಲಿ, ಬಿ.ಇಡಿ ತರಗತಿಗಳಲ್ಲಿ ಅವುಗಳನ್ನು ಬೋಧನಾ ವಿಷಯಗಳನ್ನಾಗಿ (Methods of Teaching) ತೆಗೆದುಕೊಳ್ಳಬೇಕು. ಇಲ್ಲದಿದ್ದಲ್ಲಿ ಪದವಿಯಲ್ಲಿ ಅಭ್ಯಾಸ ಮಾಡಿರುವ ಭಾಷೆ/ ವಿಷಯ ಮತ್ತು ಒಂದು ಅಥವಾ ಎರಡು Content –cum-Methodology (ಉಲ್ಲೇಖ (3)ರಂತೆ) ವಿಷಯವನ್ನು ತೆಗೆದುಕೊಂಡು ಅಧ್ಯಯನ ಮಾಡಬೇಕು. Content–cum-Methodology ಯಲ್ಲಿ 100 ಅಂಕಗಳಿಗೆ ವಿಷಯವನ್ನು ಅಧ್ಯಯನ ಮಾಡಬೇಕು. ಇದಕ್ಕೆ ಪ್ರತ್ಯೇಕವಾಗಿ ಪರೀಕ್ಷೆ ಇರುತ್ತದೆ.

3) ಪ್ರಸಕ್ತ 2013–14ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶ ಆಗುವವರೆಗೆ ದಾಖಲಾತಿ ಪ್ರಕ್ರಿಯೆಯನ್ನು ನಡೆಸುವಂತೆ ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಪ್ರಕಾಶ್ ರಾವ್ ಕೇಸರ್‌ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು).

**ಇವರಿಗೆ:**
ಸಂಕಲನಾಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು–ಮುಂದಿನ ಸಂಚಿಕೆಯಲ್ಲಿ 1000 ಪ್ರತಿಗಳನ್ನು ಪ್ರಕಟಿಸಲು ಕೋರಿದೆ.

**ಪ್ರತಿ:**

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ವಿಶೇಷಾಧಿಕಾರಿಗಳು, ಕೇಂದ್ರೀಕೃತ ದಾಖಲಾತಿ ಘಟಕ, ಸೆಂಟ್ರಲ್ ಜೂನಿಯರ್ ಕಾಲೇಜು ಆವರಣ, ಕೆ.ಜಿ.ರಸ್ತೆ, ಕಾವೇರಿ ಭವನದ ಎದುರು, ಬೆಂಗಳೂರು–2.
3. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು – 560 001.
4. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು–560 085.
5. ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಗೆ
6. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
7. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಉನ್ನತ ಶಿಕ್ಷಣ)ಯವರ ಆಪ್ತ ಕಾರ್ಯದರ್ಶಿ, ಶಿಕ್ಷಣ ಇಲಾಖೆ.
8. ಸರ್ಕಾರದ ಕಾರ್ಯದರ್ಶಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)ಯವರ ಆಪ್ತ ಕಾರ್ಯದರ್ಶಿ, ಶಿಕ್ಷಣ ಇಲಾಖೆ.
9. ಸರ್ಕಾರದ ಉಪ ಕಾರ್ಯದರ್ಶಿ (ಕಾಲೇಜು ಶಿಕ್ಷಣ) ಇವರ ಆಪ್ತ ಸಹಾಯಕರು, ಶಿಕ್ಷಣ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿ (ವಿಶ್ವವಿದ್ಯಾಲಯಗಳು) ಇವರ ಆಪ್ತ ಸಹಾಯಕರು, ಶಿಕ್ಷಣ ಇಲಾಖೆ.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.